ಕೊಡುತ್ತೇವೆ. ನೀವಾಗಿಯೇ ಯಾವ ತನಿಖೆಯನ್ನೂ ಮಾಡಕೂಡದು" ಎಂದು ಹೇಳಿ ತಾನು ಹೇಳಬೇಕಾದ್ದನ್ನು ಹೇಳಿ ಫೋನ್ ಕಟ್ ಮಾಡಿದ.

ಗಂಗಾಧರನಿಗೆ ಗೊತ್ತಿತ್ತು, ಅರೆಬೆಂದ ಸುದ್ದಿಗಳಿಂದ ಸುನಿಲ್‌ಗೆ ಪ್ರಯೋಜನ ಇಲ್ಲ ಎಂದು.

ಗಂಗಾಧರ ಮತ್ತು ಶಿವಣ್ಣ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಇಬ್ಬರ ಮುಖದಲ್ಲಿಯೂ ಒಂದೇ ಭಾವ! ಒಂದೇ ಯೋಚನೆ! 'ಇಡೀ ಘಟನಾವಳಿಗಳು ಮೇಲುನೋಟಕ್ಕೆ ಕಾಣುವಂತೆ ಸರಳವಾಗಿಲ್ಲ!'

ಯಾವುದೋ ವಿಚಾರವನ್ನು ಇಲ್ಲಿ ಮುಚ್ಚಿಡಲಾಗಿದೆ. ಇಲ್ಲ, ಯಾವುದೋ ವಿಚಾರ ಮುಚ್ಚಿಡಲು ಈ ರೀತಿ ಮಾಡಲಾಗಿದೆ. ಅದು ಅವರ ತೀರಾ ಖಾಸಗಿಯಾ ಅಥವಾ ಬೇರೇನಾ ಈಗ ತಿಳಿಯದು.

**'ಹೌದು ಸಾರ್, ನಮಗನ್ನಿಸಿದ್ದು ಆ ಕೇಸ್‌ನಲ್ಲಿ ಎಲ್ಲಾ ಗೋಜಲುಮಯವಾಗಿತ್ತು. ಎಲ್ಲಿಯೋ ಒಂದು ಮಿಸ್ಸಿಂಗ್‌ಲಿಂಕ್ ಇದೆ ಅನ್ನಿಸಿತು. ಎಲ್ಲ ಘಟನೆಗಳು ಒಟ್ಟಾಗಿ ನೋಡಿದರೆ ಏನೂ ಇಲ್ಲ... ಆದರೆ ಬಿಡಿಬಿಡಿಯಾಗಿ ನೋಡಿದರೆ ತಾಳೆಯಾಗದ ಸತ್ಯ ಇದೆ. ಅದಕ್ಕೆ ಸಾರ್.'**

"ಗಂಗಾಧರ, ಇದರ ಹಿಂದಿನ ನಿಜ ಹೊರಗೆಳೆಯುವುದು ನಮ್ಮ ಕೆಲಸ... ಅದು ತೀರಾ ಖಾಸಗಿ ವಿಚಾರವಾಗಿದ್ದರೆ ಬಿಟ್ಟು ಬಿಡೋಣ. ಇಲ್ಲವಾದರೆ ಸಾಕ್ಷ್ಯಾಧಾರಗಳನ್ನು ಸಿದ್ಧಪಡಿಸಿ ಹಾಜರುಪಡಿಸೋಣ. ಸೋ ನೋ ಕನ್‌ಫ್ಯೂಷನ್... ಎರಡು ದಿನ ನಾವು ಬೇರೆ ಬೇರೆಯಾಗಿಯೇ ಯೋಚಿಸೋಣ... ನಂತರ ಇದೇ ಜಾಗದಲ್ಲಿ ಸಂಧಿಸಿ ನಮ್ಮ ನಮ್ಮ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳೋಣ. ಸರೀನಾ... ಹಾಂ... ಆ ರಿಪೋರ್ಟರ್ ಅನ್ನೂ ಸೇರಿಸಿಕೋ. ನಾವು ಮುಂದೆ ನಿಂತು ಮಾಡಲಾಗದ ಕೆಲಸವನ್ನು ಅವನಿಂದ ಮಾಡಿಸೋಣ" ಎಂದು ಶಿವಣ್ಣ ಹೇಳಿದ. ಗಂಗಾಧರ ಸುಮ್ಮನೆ ತಲೆ ಆಡಿಸಿದ. ಅಲ್ಲಿಂದ ಅವರ ತನಿಖೆ ಹೊಸ ಹಾದಿ ಹಿಡಿಯಿತು.

ಎಸಿಪಿ ಶಿವಣ್ಣ ಡ್ರೈವರ್‌ನ ವಿಚಾರದಲ್ಲಿ ನಡೆಸಿದ ಹುಡುಕಾಟ ವ್ಯರ್ಥವಾಗಿತ್ತು. ಅವನಿದ್ದ ಜಾಗದಲ್ಲಿ ಕಂಡಿದ್ದು ದೊಡ್ಡ ಬೀಗ! ಮೊಬೈಲ್ ಸ್ವಿಚ್ ಆಫ್! ಅಕ್ಕ ಪಕ್ಕದವರಿಗೂ ತಿಳಿದಿಲ್ಲ... ಯಾಕೆಂದರೆ... ಅವನು ಅಲ್ಲಿಗೆ ಬಂದು ಕೇವಲ ಒಂದು ತಿಂಗಳಾಗಿತ್ತಷ್ಟೇ!

ಇತ್ತ ಇನ್‌ಸ್ಪೆಕ್ಟರ್ ಗಂಗಾಧರ ಸುನಿಲ್‌ನ ಜೊತೆಗೂಡಿ ಆ ಫಾರಂಹೌಸ್‌ನ ಒಳಗೆ ಹೋಗಲು ಪ್ರಯತ್ನಿಸಿ ವಿಫಲನಾದ. ಎರಡು ಗನ್‌ಮ್ಯಾನ್ ಮೂರು ನಾಲ್ಕು ನಾಯಿಗಳು ಗೇಟ್‌ನ ಒಳಗಡೆ ಇದ್ದರೆ, ಹೊರಗಡೆ ಸಾಧಾರಣ ಎರಡು ಸೆಕ್ಯುರಿಟಿ ಗಾರ್ಡ್‌ಗಳು. ಅವನ ಯೋಚನೆ ಬೇರೆ ರೂಪಕ್ಕೆ ತಿರುಗಿತು! 'ಇಂಥಾ ಹೈ ಸೆಕ್ಯುರಿಟಿ ಇರುವ ಜಾಗದಲ್ಲಿ ಸಾಧಾರಣ ಡ್ರೈವರೊಬ್ಬ ಬಂದು ಕ್ಯಾಮರಾ ಇಟ್ಟು ಏನೋ ರೆಕಾರ್ಡ್ ಮಾಡಿಕೊಂಡು ಹೋಗುವುದು ಅಸಾಧ್ಯದ ಮಾತು.'

ಅಲ್ಲಿ ಆ ರೀತಿ ಘಟನೆ ನಡೆಯಿತು ಎಂದಾದರೆ, ಅದು ಅಂದೇ ನಡೆಯುತ್ತದೆ, ಅದು ಈ ಫಾರಂ ಹೌಸ್‌ನಲ್ಲಿಯೇ ನಡೆಯುತ್ತದೆ ಎಂದು ಹೇಗೆ ತಿಳಿಯಿತು? ತಿಳಿದರೂ ಒಬ್ಬ ಸಾಧಾರಣ ಡ್ರೈವರ್ ಒಳಹೊಕ್ಕು ಆಯಕಟ್ಟಿನ ಜಾಗದಲ್ಲಿ ಕ್ಯಾಮರಾ ಇರಿಸಿ ಅದನ್ನು ರೆಕಾರ್ಡ್ ಮಾಡಿಕೊಳ್ಳಲು ಸಾಧ್ಯವಾಗಿದ್ದು ಹೇಗೆ? ಡ್ರೈವರ್ ಒಬ್ಬ ಗೃಹ ಕಾರ್ಯದರ್ಶಿ ಅವರ ಖಾಸಗಿ ಕ್ಷಣಗಳನ್ನು